ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1274/2024
ಚಾ. ಸಾ 21
ಪ್ರಾ.ಸಾ 11

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯ ಕುಮಾರ |
| ತಂದೆಯ ಹೆಸರು | : | ಅಪ್ಪು ಪೂಜಾರಿ |
| ವಯಸ್ಸು | : | 53 |
| ಉದ್ಯೋಗ | : | ಎ ಎಸ್ ಐ , ಬ್ರಹ್ಮಾವರ |
| ವಾಸಸ್ಥಳ | : | ಬ್ರಹ್ಮಾವರ |

ದಿನಾಂಕಃ 09-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಆಗಸ್ಟ 2017 ರಿಂದ ಮಾರ್ಚ್ 2024 ರವರೆಗೆ ಮುಖ್ಯ ಪೇದೆಯಾಗಿ ಮಲ್ಪೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ 02-10-2021 ರಂದು ನಾನು ಹಗಲು ಠಾಣಾ ಪ್ರಭಾರ ಕರ್ತವ್ಯದಲ್ಲಿ ಇರುವಾಗ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಹರೀಶ್ ಎಂಬುವವರು ಪೊಲೀಸ್ ಠಾಣೆ ಗೆ ಹಾಜರಾಗಿ ಕೊಟ್ಟ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 110/2021 ರಂತೆ ಪ್ರಥಮ ವರ್ತಮಾನ ವರದಿ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಪ್ರಕರಣ ಘೋರ ಅಪರಾದ ಆಗಿದ್ದರಿಂದ ಕಡತವನ್ನು ಪೊಲೀಸ್ ಉಪ ಅಧೀಕ್ಷಕರಿಗೆ ಹಸ್ತಾಂತಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ1(ಬಿ ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-9 ಎಂದು , ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಆ ದಿನ ಹಗಲು ಠಾಣಾ ಪ್ರಭಾರದಲ್ಲಿ ಇದ್ದೆ . ಸದ್ರಿ ದೂರು ಹರೀಶ್ ರವರ ಕೈಬರಹದಲ್ಲಿ ಇತ್ತು . ಸದ್ರಿ ದೂರಿನಲ್ಲಿ ಯಾವ ಆರೋಪಿ ಯಾವ ಯಾವ ಅವಾಚ್ಯ ಶಬ್ದಗಳಿಂದ ಬೈದಿದ್ದರು ಎಂದು ಇತ್ತು . ನಮ್ಮ ಪೊಲೀಸ್ ಠಾಣೆಯಿಂದ ನ್ಯಾಯಾಲಯಕ್ಕೆ 7 ಕಿಲೋ ಮೀಟರ್ ಅಂತರವಿದೆ . ನಾನುನಮ್ಮ ಸಿಬ್ಬಂದಿಗೆಬೆಳಿಗ್ಗೆ 11.30 ಕ್ಕೆ ಪ್ರಥಮ ವರ್ತಮಾನ ವರದಿವನ್ನು ನ್ಯಾಯಾಲಯಕ್ಕೆ ಕೊಡುವಂತೆ ಕೊಟ್ಟಿರುತ್ತೇನೆ. ನಾನು ಕಡತವನ್ನು ಉಡುಪಿ ಡಿವೈಎಸ್‌ಪಿ ರವರಿಗೆ ಹಸ್ತಾಂತಿಸಿರುತ್ತೇನೆ. ನಾನು ನಮ್ಮ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರವರ ಅನುಮತಿಯನ್ನು ಪಡೆದಿಲ್ಲ . ಸದ್ರಿ ಘಟನೆ ಆಗುವ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದು ದೂರಿನಲ್ಲಿ ನಮೂದಿಸಿದ್ದರು . 2 ನೇ ಆರೋಪಿ ಆ ದಿನ ನಮ್ಮ ಪೊಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತಾರೆ . ಸದ್ರಿ ದೂರನ್ನು ನಾನು ಸ್ವೀಕರಿಸಿರುತ್ತೇನೆ ಅದರ ಕಾಪಿ ಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದ್ರಿ ದಾಖಲೆಯನ್ನು ಜೆರಾಕ್ಸ್ ಆಗಿರುವುದರಿಂದ ನಿಶಾನೆಯನ್ನಾಗಿ ಮಾಡಿಲ್ಲ ಆದರೇ ಕಡತದಲ್ಲಿ ಇಡಲಾಗಿದೆ . 2 ನೇ ಆರೋಪಿ ಕೊಟ್ಟ ದೂರಿನ ಆದಾರದ ಮೇಲೆ ನಾವು ಕ್ರಮ ತೆಗೆದುಕೊಂಡಿರುತ್ತೇವೆ .

ಪಿರ್ಯಾದು ಕೊಟ್ಟ ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಪ್ರಥಮ ವರ್ತಮಾನ ವರದಿ ತಯಾರಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವೂದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.